## ಬಸ್‌ವರ್ಲ್ಡ್ ಇಂಡಿಯಾ ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಭರವಸೆ

# 5 ವರ್ಷದಲ್ಲಿ ವಿದ್ಯುತ್ ಚಾಲಿತ ಬಸ್

• ದಿಗಂತ ವರದಿ, ಬೆಂಗಳೂರು

ಬಿಎಂಟಿಸಿಯಲ್ಲಿನ 6 ಸಾವಿರ ಬಸ್‌ಗಳ ಪೈಕಿ ಕೆಲವಷ್ಟು ಹಳ್ಳಿ ಸೇರಿದರೆ, ಇನ್ನಷ್ಟು ಗುಜರಿ ಸೇರಲಿವೆ. ಈ ಎಲ್ಲ ಪೆಟ್ರೋಲ್, ಡೀಸೆಲ್‌ಚಾಲಿತ ಬಸ್‌ಗಳ ಜಾಗದಲ್ಲಿ ಇನ್ನೈದು ವರ್ಷದೊಳಗೆ ವಿದ್ಯುತ್ ಚಾಲಿತ ಬಸ್‌ಗಳು ಬರಲಿವೆ.

ಬುಧವಾರ ಬೆಂಗಳೂರು ಅಂತಾರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಬಿ2ಬಿ ಮೂರು ದಿನಗಳ ಪ್ರದರ್ಶನದ ಬಸ್‌ವರ್ಲ್ಡ್ ಇಂಡಿಯಾ ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ವಿದ್ಯುತ್ ಚಾಲಿತ ಬಸ್‌ಗಳಿಗೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ನಗರದಲ್ಲಿ ಡೀಸೆಲ್ ಬಸ್‌ಗಳ ಸಂಚಾರದಿಂದ ದಿನೇ ದಿನೇ ವಾಯುಮಾಲಿನ್ಯ ಹೆಚ್ಚಾಗುತ್ತಿದೆ. ಆ ನಿಟ್ಟಿನಲ್ಲಿ ಇನ್ನು 5 ವರ್ಷಗಳಲ್ಲಿ ಡೀಸೆಲ್ ಬಸ್‌ಗಳಿರುವ ಜಾಗದಲ್ಲಿ ಪರಿಸರಕ್ಕೆ ಪೂರಕವಾದ ವಿದ್ಯುತ್ ಚಾಲಿತ ಬಸ್‌ಗಳು ಬರಲಿವೆ ಎಂದು ತಿಳಿಸಿದರು. ಉದ್ಯಾನ ನಗರಿ ಕಳೆದ 20 ವರ್ಷದಲ್ಲಿ ವೇಗವಾಗಿ ಬೆಳೆಯುತ್ತಿದ್ದು, ಐಟಿ-ಬಿಟಿ, ವಿಜ್ಞಾನ-ತಂತ್ರಜ್ಞಾನ, ಕೈಗಾರಿಕೆ, ಸಂಶೋಧನೆ ಹಾಗೂ ಏರೋಸ್ಪೇಸ್ ಸೇರಿದಂತೆ ಎಲ್ಲ ಕ್ಷೇತ್ರಗಳಿಗೂ ಪ್ರಮುಖ ಕೇಂದ್ರವಾಗಿದೆ. ನಗರದಲ್ಲಿ ಪ್ರತಿನಿತ್ಯ 70 ಲಕ್ಷ ವಾಹನಗಳು ಸಂಚರಿಸುತ್ತಿದ್ದು, ಇದರಿಂದಾಗಿ ಸಂಚಾರ ದಟ್ಟಣೆಯೇ ಮೂಲ ಸಮಸ್ಯೆಯಾಗಿದೆ. ಅಲ್ಲದೇ ನಗರದ ಪ್ರದೇಶದಲ್ಲಿ ವಾಹನಗಳಿಗೆ ವ್ಯವಸ್ಥಿತ ರಸ್ತೆಗಳಿಲ್ಲ, ಡೀಸೆಲ್ ಬಸ್‌ಗಳಿಂದ ವಾಯುಮಾಲಿನ್ಯ ಕೂಡ ಹೆಚ್ಚಾಗಿದೆ. ಹೀಗಾಗಿ ವಿದ್ಯುತ್ ಚಾಲಿತ ಬಸ್‌ಗಳನ್ನು ಪರಿಚಯಿಸುವುದು ಅಗತ್ಯವಿದೆ ಎಂದರು.

ಪ್ರತಿನಿತ್ಯ ಹೈದರಾಬಾದ್‌ನಿಂದ ಬೆಂಗಳೂರಿಗೆ ಸಂಚರಿಸುವ ವಾಹನಗಳು ವರ್ಷಕ್ಕೆ 26 ಲಕ್ಷ ರೂ. ತೆರಿಗೆ ಪಾವತಿಸಬೇಕಿದೆ. ಈ ನಿಯಮವನ್ನು ಸಡಿಲಿಸಿ, ತೆರಿಗೆ ಕಡಿಮೆ ಮಾಡುವ ಕುರಿತು ಸಾರಿಗೆ ಸಚಿವರ ಜತೆ ಚರ್ಚಿಸಲಾಗುವುದು ಎಂದು ಅಭಿಪ್ರಾಯಪಟ್ಟರು. ಈ ಬಾರಿ ಬಿ2ಬಿಯ ಬಸ್‌ವರ್ಲ್ಡ್ ಇಂಡಿಯಾ ಕಾರ್ಯಕ್ರಮ ನಗರದಲ್ಲಿ ನಡೆಯುತ್ತಿರುವುದು ಹೆಮ್ಮೆಯ ವಿಚಾರ. ಇದರಿಂದ ಸಾರಿಗೆ ಕ್ಷೇತ್ರದಲ್ಲಿ ಹೂಡಿಕೆ ಕೂಡ ಹೆಚ್ಚಾಗುವ ನಿರೀಕ್ಷೆಯಿದೆ. ಅಲ್ಲದೇ ಈ ಪ್ರದರ್ಶನದಲ್ಲಿ ಚೀನಾ, ಕೊರಿಯಾ, ಜರ್ಮನಿ, ಆಸ್ಟ್ರೇಲಿಯಾ, ಬೆಲ್ಜಿಯಂ ಕಂಪನಿಗಳು ಆಗಮಿಸಿದ್ದು, ತಮ್ಮ ತಮ್ಮ ತಂತ್ರಜ್ಞಾನವನ್ನು ಪ್ರದರ್ಶದಲ್ಲಿ ಹಂಚಿಕೊಳ್ಳಲಿದ್ದಾರೆ. ಈ ಪ್ರದರ್ಶನದಿಂದಾಗಿ ದೇಶ ದೇಶಗಳ ನಡುವಿನ ವ್ಯಾಪಾರ ವಹಿವಾಟು ವೃದ್ಧಿಯಾಗಲಿದೆ ಎಂದರು.

ಅಂತಾರಾಷ್ಟ್ರೀಯ ಬಸ್‌ವರ್ಲ್ಡ್‌ನ ಅಧ್ಯಕ್ಷ ಡಿಡಿಯರ್ ರಾಮೌಟ್, ಟಾಟಾ ಮೋಟಾರ್ಸ್‌ನ ಸಂದೀಪ್‌ಕುಮಾರ್, ಫೋರ್ಸ್ ಮೋಟರ್ಸ್‌ನ ಆಡಳಿತಮಂಡಳಿನಿರ್ದೇಶಕಪ್ರಸನ್ನ ಪಟವರ್ಧನ್, ಎಂಜಿ ಗ್ರೂಪ್‌ನ ಮೋಹನ್ ಕಾಮತ್, ರಾಜಶೇಖರನ್, ದೀಪಕ್, ರಾಜಶರ್ಮಾ, ಪ್ರಸನ್ನ ಫಿರೋಡಿಯಾ ಉಪಸ್ಥಿತರಿದ್ದರು.



ಬೆಂಗಳೂರು ಅಂತಾರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ಬುಧವಾರ ಆಯೋಜಿಸಿದ್ದ ಅಂತಾರಾಷ್ಟ್ರೀಯ ಬಿ2ಬಿ ಮೂರು ದಿನಗಳ ಪ್ರದರ್ಶನದ ಬಸ್‌ವರ್ಲ್ಡ್ ಇಂಡಿಯಾ ಕಾರ್ಯಕ್ರಮವನ್ನು ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಉದ್ಘಾಟಿಸಿದರು.

> **ಈ ಬಾರಿಯ ಬಸ್‌ವರ್ಲ್ಡ್ ಪ್ರದರ್ಶನದಲ್ಲಿ ಸಾಕಷ್ಟು ಪ್ರತಿಷ್ಠಿತ ಕಂಪೆನಿಯ ಬಸ್‌ಗಳು ಭಾಗವಹಿಸಿರುವುದು ಸಂತಸವಾಗಿದೆ. ಅಲ್ಲದೇ ಟಾಟಾ ಮೋಟಾರ್ಸ್‌ನವರು ಭಾಗವಹಿಸಿದ್ದಾರೆ. ಈ ಮೂರು ದಿನಗಳ ಪ್ರದರ್ಶನದಿಂದ ದೇಶ ದೇಶಗಳ ನಡುವಿನ ವ್ಯಾಪಾರ ವಹಿವಾಟು ವೃದ್ಧಿಸಲಿದೆ.**
>
> ■ ಡಿಡಿಯರ್ ರಾಮೌಟ್, ಅಂತಾರಾಷ್ಟ್ರೀಯ ಬಸ್‌ವರ್ಲ್ಡ್ ಅಧ್ಯಕ್ಷ

> **ಫೋರ್ಸ್ ಮೋಟಾರ್ಸ್ ಕಳೆದ ಆರು ದಶಕಗಳಿಂದ ಹೊಸ ಹೊಸ ವಾಹನಗಳನ್ನು ಹೊರತರುತ್ತಿದೆ. ಈಗ ಹೊಸದಾಗಿ 33,41 ಸೀಟ್‌ಗಳ ಬಸ್‌ಗಳನ್ನು ಬಿಡುಗಡೆ ಮಾಡಿದೆ. ಅಲ್ಲದೇ ಈ ಬಾರಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಶಾಲಾ ವಾಹನಗಳನ್ನು ಬಿಡುಗಡೆ ಮಾಡಿದೆ.**
>
> ■ ಪ್ರಸನ್ನ, ಫೋರ್ಸ್ ಮೋಟರ್ಸ್‌ನ ಆಡಳಿತ ಮಂಡಳಿ ನಿರ್ದೇಶಕ

## ವಿವಿಧ ಕಂಪೆನಿಯ ಹೊಸ ಬಸ್‌ಗಳಿಗೆ ಚಾಲನೆ

ವಾಹನಗಳ ಉತ್ಪಾದನೆ ಮಾಡುವ ಪ್ರತಿಷ್ಠಿತ ಕಂಪೆನಿಗಳಾದ ಟಾಟಾ ಮೋಟಾರ್ಸ್, ಎಂಜಿ ಆಟೋಮೆಟಿವ್, ಫೋರ್ಸ್ ಮೋಟಾರ್ಸ್, ವೇಗಾ ಪ್ರಕಾಶ್, ಮೈಕ್ರೋಫೋರ್ಸ್ ಏರ್ ಬಸ್ ಸೇರಿದಂತೆ ಇನ್ನಿತರೆ ಕಂಪೆನಿಯ ನೂತನ ಹಾಗೂ ಅಧುನಿಕ ತಂತ್ರಜ್ಞಾನಗಳನ್ನೊಳಗೊಂಡ ಬಸ್‌ಗಳನ್ನು ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಉದ್ಘಾಟಿಸಿದರು.

ದೇಶದ ವಿವಿಧ ಮೂಲೆಗಳಿಂದ ಆಗಮಿಸಿದ್ದ ವಿವಿಧ ಕಂಪೆನಿಯ ವಿನೂತನವಾದ ಬಸ್‌ಗಳು ಪ್ರಯಾಣಿಕರಿಗೆ ಅನುಕೂಲವಾಗುವ ರೀತಿಯ ವಿನೂತ ಶೈಲಿಯ ಬಸ್‌ಗಳು, ಏರ್ ಬಸ್‌ಗಳು ಪ್ರದರ್ಶನದಲ್ಲಿ ಗಮನ ಸೆಳೆದವು. ಈಗ ಪ್ರಯಾಣಿಕರು ಬಸ್‌ಗಳನ್ನೆ ಹೆಚ್ಚು ಅವಲಂಬಿಸಿದ್ದರಿಂದ ಹೊಸ ಹೊಸ ವಿನ್ಯಾಸದಲ್ಲಿ ಹಾಗೂ ಉತ್ತಮ ಸೌಲಭ್ಯಗಳನ್ನೊಳಗೊಂಡ ಏರ್‌ಬಸ್‌ಗಳನ್ನು ಪ್ರಯಾಣಿಕರ ಗಮನ ಸೆಳೆಯಲು ಬಿಡುಗಡೆ ಮಾಡಿದ್ದಾರೆ. ಈ ಬಸ್‌ಗಳಲ್ಲಿ ಹಿಂದಿನಿಂದಲೂ ಬಾಗಿಲುಗಳಿರುವುದು, ವಿಮಾನದಲ್ಲಿರುವಂತೆ ಸೀಟ್‌ಗಳು ಎಲ್ಲ ಸೀಟ್‌ಗಳಿಗೆ ಬೆಲ್ಟ್‌ಗಳು ಅಳವಡಿಸಿರುವುದು ವಿಶೇಷವಾಗಿತ್ತು. ಫೋರ್ಸ್ ಮೋಟಾರ್ಸ್‌ನವರು ಹೊರತಂದಿರುವ



ಶಾಲಾ ಬಸ್‌ಗಳು ವಿನೂತನ ಶೈಲಿ ಹಾಗೂ ಮಕ್ಕಳಿಗೆ ಇಷ್ಟ ಆಗುವ ರೀತಿಯ ಮಿನಿಬಸ್‌ಗಳು ಇದ್ದವು. ಇದರಲ್ಲಿ ಜರ್ಮನಿ, ಬೆಲ್ಜಿಯಂ, ಟರ್ಕಿ, ಜರ್ಮನಿ, ಕೋರಿಯಾ, ಆಸ್ಟ್ರೀಯಾ ಮುಂತಾದ ದೇಶಗಳ ಪ್ರತಿನಿಧಿಗಳು ಭಾಗವಹಿಸಿ ಮೆರುಗು ತಂದರು.

ಈ ಪ್ರದರ್ಶನದಲ್ಲಿ ಬರೀ ಬಸ್‌ಗಳ ಪ್ರದರ್ಶನವಷ್ಟೆ ಅಲ್ಲದೇ ಬಸ್‌ಗಳ ಬಿಡಿಬಾಗಗಳ ತಯಾರಿಕಾ ಕಂಪೆನಿಗಳು ಭಾಗವಹಿಸಿದ್ದವು. ಈ ಪ್ರದರ್ಶನದಿಂದಪರಸ್ಪರಒಬ್ಬರಿಗೊಬ್ಬರುವ್ಯಾಪಾರ ವಹಿವಾಟು ವೃದ್ಧಿಸಿಕೊಳ್ಳಲು ಅನುಕೂಲವಾಗಿತ್ತು. ಇದರಲ್ಲಿ ಸಾವಿರಾರು ಜನ ಉದ್ಯಮಿಗಳು, ದೊಡ್ಡ ದೊಡ್ಡ ಕಂಪೆನಿ ಮಾಲೀಕರು, ಸಾರ್ವಜನಿಕರು ಪ್ರದರ್ಶನದಲ್ಲಿ ಭಾಗವಹಿಸಿದ್ದರು.